## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2022-23ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು 'ಸಹಾಯವಾಣಿ' ಸ್ಥಾಪಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಕೃಇ 73 ಕೃಕೈಉ 2021, ದಿನಾಂಕ:03.08.2021
2. ಸರ್ಕಾರದ ಆದೇಶ ಸಂಖ್ಯೆ: ಕೃಇ 76 ಕೃಕೈಉ 2021, ದಿನಾಂಕ:18.09.2021.
3. ಸರ್ಕಾರದ ಆದೇಶ ಸಂಖ್ಯೆ: ಕೃಇ 114 ಕೃಯೋಕಾ 2022, ದಿನಾಂಕ:08.04.2022.
4. ಆಯುಕ್ತರು, ಕೃಷಿ ಇಲಾಖೆ, ಇವರ ಪತ್ರ ಸಂಖ್ಯೆ:ಬೆಸವಿ/Help Desk-02/2022-23, ದಿನಾಂಕ:25.05.2022 ಮತ್ತು ದಿನಾಂಕ:26.09.2022.

*****

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮಾಂಕ(1)ರ ಆದೇಶದಲ್ಲಿ 2021-22ನೇ ಸಾಲಿನಿಂದ ಬೆಳೆ ಸಮೀಕ್ಷೆ ಯೋಜನೆಯನ್ನು '**ಮುಂದುವರೆದ ಯೋಜನೆ (ಚಾಲ್ತಿ ಯೋಜನೆ)**' ಎಂದು ಪರಿಗಣಿಸಿ, ಸದರಿ ಯೋಜನೆಯನ್ನು ಪ್ರತಿ ವರ್ಷ ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿರುತ್ತದೆ. ಅಲ್ಲದೆ, ಸದರಿ ಆದೇಶದಲ್ಲಿ ರಾಜ್ಯ ಮಟ್ಟದ ಬೆಳೆ ಸಮೀಕ್ಷೆ ತಂಡ (CSWG/PMU) ಹಾಗೂ ಬೆಳೆ ಸಮೀಕ್ಷೆ ಸಹಾಯವಾಣಿ (Help Desk) ಈ ಎರಡೂ ತಂಡಗಳು ಒಂದೇ ಕಚೇರಿಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅಧೀನದಲ್ಲಿ ಕಾರ್ಯನಿರ್ವಹಿಸಲು ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(2) ರ ಸರ್ಕಾರದ ಆದೇಶದಲ್ಲಿ 2021-22ನೇ ಸಾಲಿನಲ್ಲಿ ರಾಜ್ಯದಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು ಸುಸೂತ್ರವಾಗಿ ಅನುಷ್ಠಾನಗೊಳಿಸುವ ಸಲುವಾಗಿ ಕಿಯೋನಿಕ್ಸ್ ಸಂಸ್ಥೆಯ ರೂ.98,35,536/- ಮೊತ್ತದ ತಾಂತ್ರಿಕ ಮತ್ತು ಆರ್ಥಿಕ ದರಪಟ್ಟಿಗೆ ಅನುಮೋದನೆ ನೀಡಿ, ಕೃಷಿ ಆಯುಕ್ತಾಲಯದಲ್ಲಿ ಬೆಳೆ ಸಮೀಕ್ಷೆಯ ತಾಂತ್ರಿಕ ಸಹಾಯವಾಣಿ ತಂಡ (Help Desk) ವನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿರುತ್ತದೆ ಹಾಗೂ ಸದರಿ ವೆಚ್ಚವನ್ನು 2021-22ನೇ ಸಾಲಿನ ಆಯವ್ಯಯದ 'ಹೊಸ ಬೆಳೆ ವಿಮಾ ಯೋಜನೆ' ಲೆಕ್ಕ ಶೀರ್ಷಿಕೆ:2401-00-110-0-07 ರಡಿ ಭರಿಸಲು ಅನುಮತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(3)ರ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿನ ಕೃಷಿ ಇಲಾಖೆಯ ಮುಂದುವರೆದ ಕಾರ್ಯಕ್ರಮಗಳಿಗೆ ಅನುಮೋದನೆ ನೀಡಲಾಗಿದ್ದು, ಬೆಳೆ ಸಮೀಕ್ಷೆ ಯೋಜನೆಯನ್ನು ಸಹ ಮುಂದುವರೆಸಲಾಗಿರುತ್ತದೆ. ಬೆಳೆ ಸಮೀಕ್ಷೆ ಕಾರ್ಯದ ವೆಚ್ಚಗಳನ್ನು 2022-23ನೇ ಸಾಲಿನ ಆಯವ್ಯಯದ 'ಹೊಸ ಬೆಳೆ ವಿಮಾ ಯೋಜನೆ' ಲೆಕ್ಕ ಶೀರ್ಷಿಕೆ:2401-00-110-0-07 ರಡಿ ಬೆಳೆ ಸಮೀಕ್ಷೆಗಾಗಿ ಮೀಸಲಿರಿಸಿರುವ ರೂ.8392.56 ಲಕ್ಷಗಳಡಿ ಭರಿಸಲು ಸೂಚಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(4)ರ ಕೃಷಿ ಆಯುಕ್ತರ ಪತ್ರದಲ್ಲಿ, 2022-23ನೇ ಸಾಲಿನಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕೃಷಿ ಆಯುಕ್ತಾಲಯದಲ್ಲಿ ಬೆಳೆ ಸಮೀಕ್ಷೆ ಸಹಾಯವಾಣಿ (Help Desk) ಸ್ಥಾಪಿಸುವುದಕ್ಕೆ ಅನುಮತಿ ನೀಡುವಂತೆ ಹಾಗೂ ಸದರಿ ಸಹಾಯವಾಣಿ ಸ್ಥಾಪಿಸಲು ಅಗತ್ಯವಾದ ರೂ.98,35,536/- ಮೊತ್ತದ ಕಿಯೋನಿಕ್ಸ್ ಸಂಸ್ಥೆಯ ಈ ಕೆಳಕಂಡ ತಾಂತ್ರಿಕ ಮತ್ತು ಆರ್ಥಿಕ ದರಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಕೃಷಿ ಆಯುಕ್ತರು ಕೋರಿರುತ್ತಾರೆ.

| Costing for Help desk Support | | | | |
|---|---|---|---|---|
| Sl. No. | Description | Quantity | Unit Cost / month | Total Amount |
| 1 | Cloud based Software with Virtual NO with call tracking facilities. | 1 | 40250 | 40250 |
| 2 | L2 Level Technical Help desk Executives to support the Crop Survey Application. | 8 | 70150 | 561200 |
| 3 | Manager who is an experienced graduates from BE or MCA for managing the help desk system. | 1 | 93150 | 93150 |
| | Total Amount | | | 694600 |
| | GST @ 18% | | | 125028 |
| | Grand Total Per month | | | 819628 |
| | | | | Total per year: Rs.98,35,536/- |

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## **ಸರ್ಕಾರದ ಆದೇಶ ಸಂಖ್ಯೆ:ಕೃಇ 66 ಕೃಕೈಉ 2022, ಬೆಂಗಳೂರು, ದಿನಾಂಕ:07.11.2022.**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನಲ್ಲಿ ರಾಜ್ಯದಲ್ಲಿ ಬೆಳೆ ಸಮೀಕ್ಷೆ ಯೋಜನೆಯನ್ನು ಸುಸೂತ್ರವಾಗಿ ಅನುಷ್ಠಾನಗೊಳಿಸುವ ಸಲುವಾಗಿ, ಈ ಕೆಳಕಂಡಂತೆ ಕಿಯೋನಿಕ್ಸ್ ಸಂಸ್ಥೆಯ ವಾರ್ಷಿಕ ರೂ.98,35,536/- ಮೊತ್ತದ ತಾಂತ್ರಿಕ ಮತ್ತು ಆರ್ಥಿಕ ದರಪಟ್ಟಿಗನುಗುಣವಾಗಿ ಕೃಷಿ ಆಯುಕ್ತಾಲಯದಲ್ಲಿ ಬೆಳೆ ಸಮೀಕ್ಷೆಯ ತಾಂತ್ರಿಕ ಸಹಾಯವಾಣಿ (Help Desk) ತಂಡ ವನ್ನು ಸ್ಥಾಪಿಸಲು ಅನುಮೋದನೆ ನೀಡಿ ಆದೇಶಿಸಿದೆ.

| **Costing for Help desk Support** | | | | |
|---|---|---|---|---|
| Sl. No. | Description | Quantity | Unit Cost / month | Total Amount |
| 1 | Cloud based Software with Virtual NO with call tracking facilities. | 1 | 40250 | 40250 |
| 2 | L2 Level Technical Help desk Executives to support the Crop Survey Application. | 8 | 70150 | 561200 |
| 3 | Manager who is an experienced graduates from BE or MCA for managing the help desk system. | 1 | 93150 | 93150 |
| | **Total Amount** | | | **694600** |
| | **GST @ 18%** | | | **125028** |
| | **Grand Total Per month** | | | **819628** |
| | | | | **Total per year: Rs.98,35,536/-** |

ಸದರಿ ಬೆಳೆ ಸಮೀಕ್ಷೆಯ ತಾಂತ್ರಿಕ ಸಹಾಯವಾಣಿ ತಂಡವು ಪಾಳಿ ಪದ್ಧತಿಯಲ್ಲಿ ವಾರದ ಏಳು ದಿನ (24x7) ಕಾರ್ಯನಿರ್ವಹಿಸತಕ್ಕದ್ದು.

ಈ ತಾಂತ್ರಿಕ ಸಹಾಯವಾಣಿ ತಂಡವು ಪ್ರತಿದಿನ ಸ್ವೀಕರಿಸುವ ಕರೆಗಳ ಜಿಲ್ಲಾವಾರು ವಿವರಗಳನ್ನು ಪ್ರತಿ ಮಾಹೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ತಾಂತ್ರಿಕ ಸಹಾಯವಾಣಿ ತಂಡದ ನಿರ್ವಹಣೆಗೆ ತಗಲುವ ವೆಚ್ಚಗಳನ್ನು 2022-23ನೇ ಸಾಲಿನ ಆಯವ್ಯಯದ 'ಹೊಸ ಬೆಳೆ ವಿಮಾ ಯೋಜನೆ' ಲೆಕ್ಕ ಶೀರ್ಷಿಕೆ:2401-00-110-0-07 ರಡಿ ಬೆಳೆ ಸಮೀಕ್ಷೆಗಾಗಿ ಮೀಸಲಿರಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು. ಭರಿಸಲಾದ ವೆಚ್ಚಗಳಿಗೆ ಕೃಷಿ ಆಯುಕ್ತರು/ನಿರ್ದೇಶಕರು ಸೂಕ್ತ ಲೆಕ್ಕ ಪತ್ರಗಳನ್ನು ಇಡತಕ್ಕದ್ದು.

ಸದರಿ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಆಇ 01 ಟಿಎಫ್‌ಪಿ 2022, ದಿನಾಂಕ:23.09.2022 ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಲಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

P. Satya 07/11/22
(ಪಿ.ಸತ್ಯಭಾಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ ಎಸ್ ಎ)/ (ಇ& ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ಬೆಂಗಳೂರು.
6. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು.
8. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
9. ನಿರ್ದೇಶಕರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್, 2ನೇ ಮಹಡಿ, ಟಿಟಿಎಂಸಿ 'ಎ' ಬ್ಲಾಕ್, ಬಿಎಂಟಿಸಿ ಕಟ್ಟಡ, ಶಾಂತಿನಗರ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4&5), ವಿಧಾನ ಸೌಧ, ಬೆಂಗಳೂರು.
12. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.